## ತಿಂಗಳವಾರು ಪರ್ಯಾಯ ಶೈಕ್ಷಣಿಕ ಯೋಜನೆ

### ಘಟಕ:-ವಿನ್ಯಾಸಗಳು ಮತ್ತು ಸಮಮಿತಿ

**ತರಗತಿ:-4ನೇ** **ವಿಷಯ:-ಗಣಿತ** **ತಿಂಗಳು:-ಮಾರ್ಚ್**

| ಕ್ರ.ಸಂ | ತಿಂಗಳು/ ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 01 | ಮಾರ್ಚ್-22 ಮೊದಲ ನೇ ವಾರ | **ಸಂಖ್ಯೆಗಳ ವಿನ್ಯಾಸಗಳನ್ನು ಗುರುತಿಸುವೆ.**<br><br>**ಸಂಖ್ಯೆಗಳನ್ನು 10 ರಿಂದ ಮತ್ತು 100 ರಿಂದ ಗುಣಿಸುವೆ ಹಾಗೂ ಭಾಗಿಸುವೆ.** | **ಚಟುವಟಿಕೆ: 01** ಮಕ್ಕಳಿಗೆ ಸಂಖ್ಯೆಗಳ ವಿನ್ಯಾಸಗಳನ್ನು ಗುರುತಿಸುವುದನ್ನು ಅರ್ಥೈಸೋಣ.<br>**ಒಂದು ನಿರ್ದಿಷ್ಟವಾದ ರೀತಿಯಲ್ಲಿ ಜೋಡಣೆ ಮಾಡಿರುವ ಆಕೃತಿಗಳು ಅಥವಾ ಸಂಖ್ಯೆಗಳಿಗೆ "ವಿನ್ಯಾಸ" ಎನ್ನುತ್ತೇವೆ.**<br>**ಮಾದರಿ:01**  __________<br>(ಆಕೃತಿಗಳ ವಿನ್ಯಾಸ)<br>**ಮಾದರಿ:02** 2, 4, 8, __, __, __(ಸರಿ ಸಂಖ್ಯೆಗಳ ವಿನ್ಯಾಸ)<br>**ಮಾದರಿ:03** $9 \times 1 = 09 \longrightarrow 0+9=9$<br>$9 \times 2 = 18 \longrightarrow 1+8=9$<br>$9 \times 3 =$ ____<br>➢ **ಮಕ್ಕಳಿಗೆ ಅಭ್ಯಾಸ ಹಾಳೆ-01 ರಲ್ಲಿನ ಲೆಕ್ಕಗಳನ್ನು ಮಾಡುವಂತೆ ತಿಳಿಸೋಣ.**<br>**ಚಟುವಟಿಕೆ: 01** ಮಕ್ಕಳಿಗೆ ಸಂಖ್ಯೆಗಳನ್ನು 10 ರಿಂದ ಮತ್ತು 100 ರಿಂದ ಗುಣಿಸುವುದು ಹಾಗೂ ಭಾಗಿಸುವುದನ್ನು ಮನವರಿಕೆ ಮಾಡೋಣ.<br>**ಮಾದರಿ: 01**<br>$2 \times 10 = 20$<br>$35 \times 10 = 350$<br>$467 \times 10 = 4670$<br>**10 ರಿಂದ ಯಾವುದೇ ಸಂಖ್ಯೆಯನ್ನು ಗುಣಿಸುವಾಗ ಗುಣಿಸುವ ಸಂಖ್ಯೆಯನ್ನು ಬರೆದು ಆ ಸಂಖ್ಯೆಯ ಪಕ್ಕದಲ್ಲಿ (ಬಲಭಾಗಕ್ಕೆ) '1' ಸೊನ್ನೆ ಬರೆಯಬೇಕು.**<br>**ಮಾದರಿ: 02**<br>$4 \times 100 = 400$<br>$82 \times 100 = 8200$<br>**100 ರಿಂದ ಯಾವುದೇ ಸಂಖ್ಯೆಯನ್ನು ಗುಣಿಸುವಾಗ ಗುಣಿಸುವ ಸಂಖ್ಯೆಯನ್ನು ಬರೆದು ಆ ಸಂಖ್ಯೆಯ ಪಕ್ಕದಲ್ಲಿ (ಬಲಭಾಗಕ್ಕೆ) '2' ಸೊನ್ನೆ ಬರೆಯಬೇಕು.**<br>**ಮಾದರಿ: 03**<br>$30 \div 10 = 3$<br>$300 \div 10 = 30$<br>$60 \div 30 = 2$<br>$1200 \div 600 = 2$<br>**ಸಂಖ್ಯೆಯನ್ನು 10 ಅಥವಾ 100 ರಿಂದ ಭಾಗಿಸುವಾಗ ಭಾಜಕದಲ್ಲಿರುವಷ್ಟೆ ಸೊನ್ನೆಗಳನ್ನು ಭಾಜ್ಯದಲ್ಲಿಯೂ ತೆಗೆದು ನಂತರ ಭಾಗಾಕಾರ ಕ್ರಿಯೆ ಮಾಡಬೇಕು.** | **ಅಭ್ಯಾಸ ಹಾಳೆ-01** |

<table>
<tr>
<td></td>
<td></td>
<td><br><br>ಸಮಮಿತಿಯ ಆಧಾರದ ಮೇಲೆ ಜ್ಯಾಮಿತೀಯ ವಿನ್ಯಾಸಗಳನ್ನು ಗುರುತಿಸುವೆ.</td>
<td>

➢ **ಮಕ್ಕಳಿಗೆ ಅಭ್ಯಾಸ ಹಾಳೆ–02 ರಲ್ಲಿನ ಲೆಕ್ಕಗಳನ್ನು ಮಾಡುವಂತೆ ತಿಳಿಸೋಣ.**

**ಚಟುವಟಿಕೆ: 01** ಮಕ್ಕಳಿಗೆ ಸಮಮಿತಿಯ ಆಧಾರದ ಮೇಲೆ ಜ್ಯಾಮಿತೀಯ ವಿನ್ಯಾಸಗಳನ್ನು ಗುರುತಿಸುವುದನ್ನು ತಿಳಿಸೋಣ.

**ಮಾದರಿ: 01**




ಈ ಆಕೃತಿಯನ್ನು ರೇಖೆಯ ನೇರದಲ್ಲಿ ಮಡಚುವಿಕೆಯಿಂದ ಎರಡು ಸಮಮಿತಿಯ ಆಕೃತಿಗಳನ್ನು ಪಡೆಯುತ್ತೇವೆ. ಈ ಸಮಮಿತಿಯಲ್ಲಿ "ಸಮಮಿತಿಯ ಒಂದು ಅಕ್ಷ" ಇದೆ.

**ಮಾದರಿ: 02**



ಸಮಬಾಹು ತ್ರಿಭುಜದಲ್ಲಿ ಸಮಮಿತಿಯ ಮೂರು ಅಕ್ಷಗಳಿವೆ.

**ಯಾವುದೇ ಒಂದು ರೇಖೆಯ ಎರಡು ಕಡೆಗಳಲ್ಲೂ ಇರುವ ನಿಯಮಿತ ಸಮತೋಲನವುಳ್ಳ ವ್ಯವಸ್ಥಿತ ರಚನೆಯನ್ನು ಸಮಮಿತಿ ಎನ್ನುತ್ತಾರೆ. ಸಮಮಿತಿಯನ್ನು ಉಂಟುಮಾಡುವ ರೇಖೆಯನ್ನು**

ಯಥಾಪ್ರಮಾಣಾಕ್ಷ (Axis of symmetry) ಎನ್ನುತ್ತಾರೆ.

</td>
<td>ಅಭ್ಯಾಸ ಹಾಳೆ–02</td>
</tr>
<tr>
<td></td>
<td></td>
<td><br><br>ಟ್ಯಾನ್‌ಗ್ರಾಮ್ಸ್ ಮತ್ತು ವಿನ್ಯಾಸಗಳು<br>ಟ್ಯಾನ್‌ಗ್ರಾಮ್ ಬಳಸಿ ಕೆಲವು ಸರಳ ಆಕೃತಿಗಳನ್ನು ರಚಿಸುವೆ.</td>
<td>

➢ **ಮಕ್ಕಳಿಗೆ ಅಭ್ಯಾಸ ಹಾಳೆ–03 ರಲ್ಲಿನ ಲೆಕ್ಕಗಳನ್ನು ಮಾಡುವಂತೆ ತಿಳಿಸೋಣ.**

**ಚಟುವಟಿಕೆ: 01** ಮಕ್ಕಳಿಗೆ 7 ತುಣುಕು ಟ್ಯಾನ್‌ಗ್ರಾಂ ಮಾಡುವುದನ್ನು ತಿಳಿಸಿ ನಂತರ ಅವುಗಳನ್ನು ಬಳಸಿ ಕೆಲವು ಸರಳ ಆಕೃತಿಗಳನ್ನು ರಚಿಸುವಂತೆ ಮಾರ್ಗದರ್ಶಿಸೋಣ.

**ವಿಧಾನ:–** ಒಂದು 36 ಚೌಕಗಳಿರುವ ಗ್ರಾಫ್ ಹಾಳೆಯನ್ನು ಕತ್ತರಿಸು. ನಂತರ ಚಿತ್ರದಲ್ಲಿರುವಂತೆ 7 ಭಾಗಗಳಾಗಿ ಗುರುತಿಸಿ ಕತ್ತರಿಸು. ಪ್ರತಿಭಾಗವು ಒಂದು 'ಆಕೃತಿ' ಹೊಂದಿರುತ್ತದೆ.






</td>
<td>ಅಭ್ಯಾಸ ಹಾಳೆ–03</td>
</tr>
</table>

ಪರಿಚಿತ ಆಕಾರದ ಹಾಸುಗಳನ್ನು ಬಳಸಿ, ವಿವಿಧ ವಿನ್ಯಾಸಗಳನ್ನು ರಚಿಸುವೆ.

**ಮಾದರಿ: 01** 7 ತುಣುಕು ಟ್ಯಾನ್‌ಗ್ರಾಂ ಆಕೃತಿಗಳನ್ನು ಬಳಸಿ ಕೆಳಗಿನ ಆಕೃತಿಯನ್ನು ರಚಿಸು.



**ಚಟುವಟಿಕೆ: 01** ಮಕ್ಕಳು ಕಲಿತಿರುವ ಆಕೃತಿಗಳಾದ ಚೌಕ, ತ್ರಿಭುಜ, ಚೌಕ ಮತ್ತು ಆಯತಗಳನ್ನು ಬಳಸಿ ಹಾಸುಗಳನ್ನು ಮಾಡುವುದನ್ನು ತಿಳಿಸೋಣ.

**ಮಾದರಿ: 01** ತ್ರಿಭುಜದ ಆಕೃತಿಯನ್ನು ಬಳಸಿ ಕೆಳಗಿನ ವಿನ್ಯಾಸವನ್ನು ಪೂರ್ಣಗೊಳಿಸು.



- **ಮಕ್ಕಳಿಗೆ ಅಭ್ಯಾಸ ಹಾಳೆ–04 ರಲ್ಲಿನ ಲೆಕ್ಕಗಳನ್ನು ಮಾಡುವಂತೆ ತಿಳಿಸೋಣ.**

**ಅಭ್ಯಾಸ ಹಾಳೆ–04**

**ಘನಾಕೃತಿಗಳು**

**ಘನಾಕೃತಿಯಲ್ಲಿ ಮುಖಗಳು, ಶೃಂಗಗಳು ಹಾಗೂ ಅಂಚುಗಳನ್ನು ಗುರುತಿಸುವೆ.**

**ಚಟುವಟಿಕೆ: 01** ಮಕ್ಕಳಿಗೆ ಘನಾಕೃತಿಯಲ್ಲಿ ಮುಖಗಳು, ಶೃಂಗಗಳು ಹಾಗೂ ಅಂಚುಗಳನ್ನು ಗುರುತಿಸುದನ್ನು ಅನುಕೂಲಿಸೋಣ.

**ಕೆಳಗಿನ ಆಕೃತಿಗಳ ಮುಖಗಳ, ಅಂಚುಗಳ, ಶೃಂಗಗಳ ಬೆಲೆಯನ್ನು ಹೇಳಬಲ್ಲೆಯಾ?**

**ಎರಡು ಮುಖಗಳು ಸೇರುವ ಭಾಗವನ್ನು 'ಅಂಚು' ಎನ್ನುವರು.**

**ಎರಡು ಅಂಚುಗಳು ಸೇರುವ ಭಾಗವನ್ನು 'ಶೃಂಗ' ಎನ್ನುವರು.**

**ಮಾದರಿ:–**

| | | | |
|---|---|---|---|
|  | ಆಯತ ಘನ | ಮುಖಗಳು | 6 |
| | | ಅಂಚುಗಳು | 12 |
| | | ಶೃಂಗಗಳು | 8 |

**ಸಮತಲಾಕೃತಿಗಳು ಮತ್ತು ಘನಾಕೃತಿಗಳಿಗಿರುವ ವ್ಯತ್ಯಾಸವನ್ನು ಅರಿಯುವೆ.**

**ಮೂರು ಆಯಾಮಗಳ ಆಕೃತಿಗಳನ್ನು ಬಿಡಿಸುವೆ.**




**ಚಟುವಟಿಕೆ: 01** ಮಕ್ಕಳಿಗೆ ಸಮತಲಾಕೃತಿಗಳು ಮತ್ತು ಘನಾಕೃತಿಗಳಿಗಿರುವ ವ್ಯತ್ಯಾಸವನ್ನು ತಿಳಿಸೋಣ.

| ಸಮತಲಾಕೃತಿ | ಘನಾಕೃತಿ |
|---|---|
| ಸಮತಲಾಕೃತಿಯು ಉದ್ದ ಮತ್ತು ಅಗಲ ಎಂಬ ಎರಡು ಆಯಾಮಗಳನ್ನು ಹೊಂದಿದೆ. | ಘನಾಕೃತಿಯು ಉದ್ದ, ಅಗಲ ಮತ್ತು ಎತ್ತರ ಎಂಬ ಮೂರು ಆಯಾಮಗಳನ್ನು ಹೊಂದಿದೆ. |

**ಚಟುವಟಿಕೆ:01** ಮಕ್ಕಳಿಗೆ ಈಗಾಗಲೇ ಕಲಿತಿರುವ ಎರಡು ಆಯಾಮದ ಆಕೃತಿಗಳನ್ನು ಬಿಡಿಸುವುದನ್ನು ನೆನೆಪು ಮಾಡುತ್ತಾ ಮೂರು ಆಯಾಮಗಳ ಆಕೃತಿಯನ್ನು ಬಿಡಿಸಲು ತಿಳಿಸೋಣ.

**ಮಾದರಿ:01** ಆಯತ, ಚೌಕ, ತ್ರಿಭುಜ ಮತ್ತು ವೃತ್ತವನ್ನು ಬಿಡಿಸು.



**ಮಾದರಿ:02** ಆಯತ ಘನ, ಚೌಕ ಘನ, ಸಿಲಿಂಡರ್, ಶಂಖು ಮತ್ತು ಗೋಳವನ್ನು ಬಿಡಿಸು.







- ಮಕ್ಕಳಿಗೆ ಅಭ್ಯಾಸ ಹಾಳೆ–05 ರಲ್ಲಿನ ಲೆಕ್ಕಗಳನ್ನು ಮಾಡುವಂತೆ ತಿಳಿಸೋಣ.

**ಅಭ್ಯಾಸ ಹಾಳೆ–05**

ತರಗತಿ:–4ನೇ　　　　ಅಭ್ಯಾಸ ಹಾಳೆ:01　　　　ತಿಂಗಳು:–ಮಾರ್ಚ್

**ಕೆಳಗಿನ ಚಿತ್ರ ವಿನ್ಯಾಸವನ್ನು ಪೂರ್ಣಗೊಳಿಸು.**





**ಕೆಳಗಿನ ಸಂಖ್ಯೆಗಳನ್ನು ವಿನ್ಯಾಸಕ್ಕನುಗುಣವಾಗಿ ಪೂರ್ಣಗೊಳಿಸು.**

| | | | | | | | | | |
|---|---|---|---|---|---|---|---|---|---|
| 2 | 4 | 6 | 8 | 10 | | | | | |

| | | | | | | | | | |
|---|---|---|---|---|---|---|---|---|---|
| 17 | 19 | 21 | 23 | 25 | | | | | |

| | | | | | | | | | |
|---|---|---|---|---|---|---|---|---|---|
| 1 | 3 | 5 | 7 | 9 | | | | | |

| | | | | | | | | | |
|---|---|---|---|---|---|---|---|---|---|
| 40 | 38 | 36 | 34 | 32 | | | | | |

| | | | | | | | | | |
|---|---|---|---|---|---|---|---|---|---|
| 10 | 15 | 20 | 25 | 30 | | | | | |

| | | | | | | | | | |
|---|---|---|---|---|---|---|---|---|---|
| 3 | 6 | 9 | 12 | 15 | | | | | |

ತರಗತಿ:–4ನೇ　　　　ಅಭ್ಯಾಸ ಹಾಳೆ:02　　　　ತಿಂಗಳು:–ಮಾರ್ಚ್

**ಸಂಖ್ಯೆಗಳನ್ನು 10 ರಿಂದ ಮತ್ತು 100 ರಿಂದ ಗುಣಿಸು.**

**ಮಾದರಿ:–** 5 × 10 = 50

1) 235 × 10 =
2) 407 × 10 =
3) 10 × 89 =
4) 10 × 67 =
5) 5 × 100 =
6) 100 × 44 =
7) 987 × 100 =
8) 82 × 100 =
9) 45 ನ್ನು 10 ರಿಂದ ಗುಣಿಸಿದಾಗ ________
10) 100 ರಿಂದ 70 ನ್ನು ಗುಣಿಸಿದಾಗ ________
11) 34 ನ್ನು 200 ರಿಂದ ಗುಣಿಸಿದಾಗ ________
12) 500 ರಿಂದ 2 ನ್ನು ಗುಣಿಸಿದಾಗ ________

**ಸಂಖ್ಯೆಗಳನ್ನು 10 ರಿಂದ ಮತ್ತು 100 ರಿಂದ ಗುಣಿಸು.**

**ಮಾದರಿ:–** 70 ÷ 10 = 7

1) 400 ÷ 10 =
2) 90 ÷ 30 =
3) 1200 ÷ 400 =
4) 8000 ÷ 100 =
5) 2100 ÷ 700 =
6) 600 ÷ 20 =
7) 5000 ನ್ನು 10 ರಿಂದ ಭಾಗಿಸಿದಾಗ ________
8) 100 ರಿಂದ 7000 ನ್ನು ಭಾಗಿಸಿದಾಗ ________
9) 30 ನ್ನು 10 ರಿಂದ ಭಾಗಿಸಿದಾಗ ________
10) 1000 ÷ 50 =

ತರಗತಿ:-4ನೇ ಅಭ್ಯಾಸ ಹಾಳೆ:03 ತಿಂಗಳು:-ಮಾರ್ಚ್

ಈ ಆಕೃತಿಗಳಿಗೆ ಯಥಾಪ್ರಮಾಣಾಕ್ಷಗಳನ್ನು ಎಳೆ:-

ಮಾದರಿ:-








ಈ ಅಕ್ಷರಗಳಿಗೆ ಯಥಾಪ್ರಮಾಣಾಕ್ಷಗಳನ್ನು ಎಳೆ:-














ಆಕೃತಿಗಳಲ್ಲಿ ಗರಿಷ್ಠ ಯಥಾಪ್ರಮಾಣಾಕ್ಷಗಳನ್ನು ಎಳೆ:-





ತರಗತಿ:–4ನೇ ಅಭ್ಯಾಸ ಹಾಳೆ:04 ತಿಂಗಳು:–ಮಾರ್ಚ್

**ಟ್ಯಾನ್‌ಗ್ರಾಂ ತುಣುಕುಗಳನ್ನು ಬಳಸಿ ಆಕೃತಿಗಳನ್ನು ರಚಿಸು:–**



**ಬಣ್ಣ ತುಂಬಿ ವಿನ್ಯಾಸವನ್ನು ಪೂರ್ಣಗೊಳಿಸು:–**













ತರಗತಿ:–4ನೇ ಅಭ್ಯಾಸ ಹಾಳೆ:05 ತಿಂಗಳು:–ಮಾರ್ಚ್

ಈ ಆಕೃತಿಗಳ ಮುಖಗಳು, ಅಂಚುಗಳು ಮತ್ತು ಶೃಂಗಗಳ ಸಂಖ್ಯೆ ನಮೂದಿಸು:–

ಮಾದರಿ:–




| | | | |
|---|---|---|---|
| ಆಯತ ಘನ | ಮುಖಗಳು | 6 |
| | ಅಂಚುಗಳು | 12 |
| | ಶೃಂಗಗಳು | 8 |




| | | |
|---|---|---|
| ಚೌಕ ಘನ | ಮುಖಗಳು | |
| | ಅಂಚುಗಳು | |
| | | 8 |




| | | |
|---|---|---|
| ಶಂಖ | ಮುಖಗಳು | |
| | | 1 |
| | ಶೃಂಗಗಳು | |




| | | |
|---|---|---|
| ಗೋಳ | ಮುಖಗಳು | 6 |
| | ಅಂಚುಗಳು | 12 |
| | ಶೃಂಗಗಳು | 8 |




| | | |
|---|---|---|
| ಸಿಲಿಂಡರ್ | | 2 |
| | ಅಂಚುಗಳು | |
| | ಶೃಂಗಗಳು | |

ಆಯತ, ಚೌಕ, ತ್ರಿಭುಜ, ವೃತ್ತ, ಆಯತ ಘನ, ಚೌಕ ಘನ, ಗೋಳ, ಸಿಲಿಂಡರ್ ಮತ್ತು ಶಂಖ ಆಕೃತಿಗಳನ್ನು ಬಿಡಿಸು:–

| | | |
|---|---|---|
| | | |
| | | |
| | | |

ಕೆಳಗಿನ ವಸ್ತುಗಳು ಯಾವ ಆಕೃತಿಯನ್ನು ಹೋಲುತ್ತವೆ:–

      

     